

ಪ್ರೀತಿಯ ಕೀಲಿಕೈಗಾಗಿ, ಸಮಾನತೆಯ ಕೀಲಿಕೈಗಾಗಿ ನಮ್ಮೆಲ್ಲರ ಹುಡುಕಾಟ

ಬಹುಕಾಲದಿಂದ ಕೇಳುತ್ತಲೇ ಇದ್ದೇವೆ. ವ್ಯವಸ್ಥೆಯಲ್ಲಿ ಈಗಾಗಲೇ ಇರುವ ಲೋಪವನ್ನು ಸರಿಪಡಿಸುವ, ಅಂದರೆ, 'ತಾನು ಯಾರದೇ ಸೇವಕಿಯಲ್ಲ, ಬದಲಿಗೆ ಸಮರ್ಥವಾಗಿ ಬಾಳುವ ನಡೆಸಬಲ್ಲ ಶಕ್ತಿಯನ್ನು ಹೊಂದಿರುವ ಸ್ವತಂತ್ರ ಜೀವಿ' ಎಂಬ ವಿಶ್ವಾಸವನ್ನು ಹೆಣ್ಣಿನಲ್ಲಿ ಮೂಡಿಸುವ ಪ್ರಯತ್ನಗಳು ತಕ್ಕಮಟ್ಟಿಗೆ ನಡೆದಿವೆ. ಅಥವಾ ಈ ದೃಷ್ಟಿಕೋನದಿಂದಷ್ಟೇ ನಿರಂತರ ಪ್ರಯತ್ನಗಳು ನಡೆಯುತ್ತಲೇ ಇವೆ ಎನ್ನಬಹುದು. ಈ ಪ್ರಯತ್ನದ ಫಲವಾಗಿಯೇ ಅನೇಕ ಕಡೆ ಮಹಿಳಾ ಸಬಲೀಕರಣ, ಹೆಣ್ಣುಮಕ್ಕಳ ಶಿಕ್ಷಣ, ದೌರ್ಜನ್ಯಗಳ ವಿರುದ್ಧ ಹೋರಾಡುವುದಕ್ಕೆ ಪ್ರೇರಣೆಗಳನ್ನು ಒದಗಿಸುವ ಕೆಲಸಗಳು ನಡೆಯುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ಮಹಿಳಾ ಅಧ್ಯಯನಕ್ಕೆ ಸಂಬಂಧಿಸಿದ ಕ್ಷೇತ್ರವು ಸಾಕಷ್ಟು ಬೆಳೆದಿದೆ ಎನ್ನಬಹುದು.

ಪುರುಷ ಪ್ರಧಾನವಾಗಿರುವ ಸಮಾಜದ ಕೊರತೆಗಳನ್ನು ಗುರುತಿಸುವ ಮತ್ತು ಅದು ಸೃಷ್ಟಿಮಾಡುವ ಹಾನಿಗಳನ್ನು ಪಟ್ಟಿ ಮಾಡುವ ಪ್ರಯತ್ನಗಳೂ ದೊಡ್ಡ ಪ್ರಮಾಣದಲ್ಲಿ ನಡೆದಿವೆ. ಆದರೆ ಹಾಗೆ ಗುರ್ತಿಸಿಕೊಂಡ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ನಡೆಯಬೇಕಾದ ಪ್ರಯತ್ನಗಳು ಜೊತೆಜೊತೆಯಾಗಿ ನಡೆಯಬೇಕು. ಮಹಿಳೆಯರು ಎದುರಿಸುವ ಸಮಸ್ಯೆಗಳನ್ನು ಗುರ್ತಿಸಿದ ಬಳಿಕ, ಅವುಗಳನ್ನು ಬಗೆಹರಿಸಬೇಕಾದರೆ ಹಲವು ಆಯಾಮಗಳಲ್ಲಿ ರಚನಾತ್ಮಕವಾದ ಬದಲಾವಣೆಗಳನ್ನು ಮಾಡಬೇಕಾಗಿದೆ. ಸಹಜೀವಿಯಾಗಿರುವ ಪುರುಷನ ಜೊತೆಗೆ ಸಂವಾದದ ಅಗತ್ಯ, ಮೂಲಭೂತ ಶಿಕ್ಷಣ ನೀಡುವ ಕ್ರಮದಲ್ಲಿ ಬದಲಾವಣೆ, ಕೌಟುಂಬಿಕವಾಗಿ ಯೋಚಿಸುವ ಧಾಟಿಯಲ್ಲಿ ಬದಲಾವಣೆ – ಇವೆಲ್ಲ ಆಗಬೇಕಾಗಿರುವ ಬದಲಾವಣೆಗಳು. ಇದು ಸಾಧ್ಯವಾದಾಗ, ಸಾಮಾಜಿಕ ಧೋರಣೆಯು ಒಟ್ಟಂದದಲ್ಲಿ ಸಹಜವಾಗಿಯೇ ಬದಲಾಗುತ್ತದೆ. ಆಗ, ಗಂಡು ಕೂಡ ಈ ಜಗತ್ತನ್ನು ಇನ್ನಷ್ಟು ಹೆಚ್ಚು ಸುಂದರವಾಗಿ ಗ್ರಹಿಸಬಲ್ಲನು. ಹೆಣ್ಣು ಸುರಕ್ಷಿತ ವಾತಾವರಣದಲ್ಲಿ ಸಂತಸದಿಂದ ಜೀವಿಸಬಲ್ಲಳು.

ವಿಶ್ಲೇಷಣೆಗಾಗಿ ಕೆಲವು ಕಾರಣಗಳನ್ನು ಕಂಡುಕೊಂಡರೂ ಕೌಟುಂಬಿಕ ಮತ್ತು ಶೈಕ್ಷಣಿಕ ವ್ಯವಸ್ಥೆಯಲ್ಲಿ ಗಂಡುಮಕ್ಕಳಿಗೆ ಸೂಕ್ತ ಮಾರ್ಗದರ್ಶನದ ಅಗತ್ಯವಿದೆ ಎಂಬುದನ್ನು ತಜ್ಞರು ಪ್ರಧಾನವಾಗಿ ಗುರುತಿಸುತ್ತಾರೆ. ಅದರಲ್ಲಿಯೂ ಕೌಟುಂಬಿಕ ಶಿಕ್ಷಣದ ಸಂದರ್ಭ ಬಂದಾಗ ಗಂಡುಮಕ್ಕಳಿಗೆ ಸೂಕ್ತ ಮಾರ್ಗದರ್ಶನವನ್ನು ನೀಡುವ ಅಗತ್ಯವನ್ನು ಪೋಷಕರಿಗೆ ಮನದಟ್ಟು ಮಾಡಬೇಕಾಗಿದೆ.

ಮೈಸೂರಿನಲ್ಲಿ ಮಕ್ಕಳ ಆಪ್ತ ಸಮಾಲೋಚಕಿ ಆಗಿರುವ ಚಿತ್ರಾ ಸಿ. ಅವರು ಜೀವನ ಕೌಶಲಗಳ ತರಬೇತುದಾರರೂ ಹೌದು. ಅವರು ಹೇಳುವ ಪ್ರಕಾರ, 'ಮಕ್ಕಳನ್ನು ಮನೆಗಳಲ್ಲಿ ಪೋಷಿಸುವ ವಿಧಾನಗಳಲ್ಲೇ ತೊಡಕಿದೆ. ನೈತಿಕತೆ ಎಂಬ ಪರಿಕಲ್ಪನೆ ಕೇವಲ ಹೆಣ್ಣಿಗೆ ಸೀಮಿತವಾಗಿದ್ದು, ಅದಕ್ಕೆ ಸಂಬಂಧಿಸಿದ ಜವಾಬ್ದಾರಿಗಳನ್ನು ಹೆಣ್ಣಿನ ಮೇಲಷ್ಟೇ ಹೊರಿಸಲಾಗಿದೆ. ಇದು ಅಸಮಾನತೆಯಲ್ಲದೆ ಮತ್ತೇನೂ ಅಲ್ಲ. ಹೆಣ್ಣಾದವಳು ಮತ್ತೊಂದು ಮನೆಗೆ ಹೋಗಬೇಕಾದ್ದರಿಂದ, ಆಕೆಯ ಗುಣನಡತೆಗಳು ಚೆನ್ನಾಗಿರಬೇಕು; ಹೊಂದಿಕೊಳ್ಳುವ, ತಾಳಿಕೊಂಡು ಜೀವನ ಸಾಗಿಸುವ ಗುಣವನ್ನು ಆಕೆಯಲ್ಲಿ ತುಂಬಬೇಕು ಎಂಬ ಯೋಚನೆ ಪಾಲಕರದ್ದಾಗಿರುತ್ತದೆ. ಹೆಣ್ಣು ಮದುವೆಯಾಗಿ ಬೇರೆಡೆಗೆ ಹೋಗಬೇಕಾದವಳು ಎಂಬುದೇ ಅವರ ಒಟ್ಟು ಯೋಚನೆಗಳಿಗೆ ಪ್ರೇರಣೆಯಾಗಿರುತ್ತದೆ. ಆದ್ದರಿಂದ ನೈತಿಕತೆಯ ಭಾರವನ್ನೂ ಆಕೆಯೊಬ್ಬಳೇ ಹೊರಬೇಕಾಗಿದೆ'.

ಎಳೆಯರ ತಲೆಗೆ ಏನೇನು ವಿಚಾರಗಳನ್ನು ಹೆತ್ತವರು ತುಂಬುತ್ತಾರೆ ಎಂಬುದರ ಜೊತೆಗೆ, ಮಕ್ಕಳಿಗೆ ಸೆಕ್ಷುವಾಲಿಟಿ ಎಜುಕೇಷನ್ ಒದಗಿಸಬೇಕಾದ್ದು ಮತ್ತೊಂದು ಅಗತ್ಯ. ಆದರೆ, ಈ ಮಾತನ್ನು ಹೇಳಿದ ತಕ್ಷಣ ಪೋಷಕರೇ ದಿಗಿಲುಬೀಳುತ್ತಾರೆ. ಮಕ್ಕಳಿಗೆ ಸೆಕ್ಷುವಾಲಿಟಿ ಕುರಿತ ಶಿಕ್ಷಣ ನೀಡುವುದಕ್ಕೆ ಸಾಮಾಜಿಕವಾಗಿ ಈಗಲೂ ತೀವ್ರ ಪ್ರತಿರೋಧವಿದೆ. ಸೆಕ್ಷುವಾಲಿಟಿ ಎಜುಕೇಶನ್ ಎನ್ನುವುದು ಸೆಕ್ಸ್ ಕುರಿತ ಶಿಕ್ಷಣವಲ್ಲ. ಗಂಡು ಮತ್ತು ಹೆಣ್ಣು ಸಾಮಾಜಿಕವಾಗಿ ಹೇಗೆ ವರ್ತಿಸಬೇಕು, ಎಷ್ಟರ ಮಟ್ಟಿಗಿನ ಹೊಣೆಗಾರಿಕೆಯನ್ನು ಅವರು ನಿಭಾಯಿಸಬೇಕು ಎಂಬುದನ್ನು ಕಲಿಸುವುದಾಗಿದೆ. ಮಕ್ಕಳ ಪುಟ್ಟಪುಟ್ಟ ಕುತೂಹಲಕ್ಕೆ ಅವರ ಭಾಷೆಯಲ್ಲಿಯೇ ಉತ್ತರಿಸುತ್ತ, ಆ ಕುರಿತು ಅವರ ಜ್ಞಾನವನ್ನು ಹರಿತಗೊಳಿಸುವುದಾಗಿದೆ.

## ದೊಡ್ಡವರೇ ಪರಿಹಾರ ಹೇಳಬೇಕು

ಹೆಚ್ಚಿನ ಮನೆಗಳಲ್ಲಿ ಲೈಂಗಿಕತೆಗೆ ಸಂಬಂಧಿಸಿದ ಮಕ್ಕಳ ಪ್ರಶ್ನೆಗಳಿಗೆ ಪೋಷಕರು ಹಾರಿಕೆಯ

